# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.776/ 2021

ಸಿಡಬ್ಲ್ಯೂಃ 1
ಪಿಡಬ್ಲ್ಯೂಃ 1

ದಿನಾಂಕಃ **07-11-2024**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಎಸ್.ಪಿ. ರವರಿಂದಃ

ನಾನು ಶಾಲೆಯನ್ನು ಕಲಿತ್ತಿರುವುದಿಲ್ಲ ಎಂದರೆ ಸರಿ. ಆಟೋದಲ್ಲಿ ನಾನು ಚಾಲಕನ ಕಡೆಗೆ ಮುಖ ಮಾಡಿ ಕುಳಿತ್ತಿದ್ದೆ ಆ ಕಾರಣ ಆಟೋದ ಹಿಂದುಗಡೆ ಬರುತ್ತಿದ್ದ ವಾಹನಗಳು ಕಾಣುವುದಿಲ್ಲ ಎಂದರೆ ಸಾಕ್ಷಿಯು ನನಗೆ ಕನ್ನಡಿಯಲ್ಲಿ ಕಾಣುತ್ತಿತ್ತು ಎಂದು ಹೇಳುತ್ತಾರೆ. ಆ ದಿನ ಆಟೋದಲ್ಲಿ 4 ಜನರು ಇದ್ದೇವು. ನಾನು ನಾಲ್ಕು ಜನರ ಮಧ್ಯದಲ್ಲಿ ಕುಳಿತ್ತಿದ್ದೆ. ನಾನು ಮಧ್ಯದಲ್ಲಿ ಕುಳಿತ್ತಿರುವ ಕಾರಣ ಆಟೋದ ಹಿಂದುಗಡೆ ಬರುತ್ತಿದ್ದ ವಾಹನಗಳು ಕನ್ನಡಿಯಲ್ಲಿ ಕಾಣುವುದಿಲ್ಲ ಎಂದರೆ ಸರಿಯಲ್ಲ. ಆಟೋಕ್ಕೆ ಡಿಕ್ಕಿಪಡಿಸಿದ ವಾಹನದ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಬೆಳಗ್ಗೆ 9 ಗಂಟೆಗೆ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು. ಒಂದು ಬಿಳಿ ಹಳೆಯ ಮೇಲೆ ಪೊಲೀಸರು ನನಗೆ ಹೆಬ್ಬಟ್ಟಿನ ಗುರುತು ಹಾಕು ಎಂದು ಹೇಳಿದ ಕಾರಣ ನಾನು ಹೆಬ್ಬಟ್ಟಿನ ಗುರುತು ಹಾಕಿರುತ್ತೇನೆ ಎಂದರೆ ಸರಿ. ನಾನು ಹೆಬ್ಬಟ್ಟಿನ ಗುರುತು ಹಾಕಿದ ದಾಖಲೆಯಲ್ಲಿ ಪೊಲೀಸರು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

ಕಳೆದ 4 ವರ್ಷಗಳ ಹಿಂದೆ ನಾನು ಮತ್ತು ಚಾಸಾ-4 ರವರು ನಮ್ಮ ತಾಂಡಾದ ಆಟೋದಲ್ಲಿ ಅಲ್ಲಿಪೂರದಿಂದ ಯಾದಗಿರಿ ಪಟ್ಟಣಕ್ಕೆ ಸಂತೆ ಗೊಸ್ಕರ ಬರುತ್ತಿದ್ದೇವು ಕಂಚಗರಹಳ್ಳಿ ಗೇಟ್ ಹತ್ತಿರ ಬುಲೆರೋ ವಾಹನದವನು ಅತೀ ವೇಗವಾಗಿ ಬಂದು ನಮ್ಮ ಆಟೋಕ್ಕೆ ಡಿಕ್ಕಿಪಡಿಸಿರುತ್ತೇನೆ ಎಂದು ನಾನು ಸುಳುಳ ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆಟೋಕ್ಕೆ ಡಿಕ್ಕಿ ಪಡಿಸಿದ್ದರಿಂದ ಆಟೋ ಪಾಲ್ಟಿಯಾಯಿತ್ತು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನ್ನ ಬಲಗೈ ಮುರಿದಿರುತ್ತದೆ ನನ್ನ ಹೊಟ್ಟೆಗೆ ಗಾಯ ಆಗಿರುತ್ತದೆ ಮತ್ತು ಅದಕ್ಕೆ 4 ಹೊಲಿಗೆ ಹಾಕಿರದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂರೆ ಸರಿಯಲ್ಲ. ನನ್ನ ಬಲಗೈಗೆ ಪೆಟ್ಟು ಬಿದ್ದಿತ್ತು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅತ್ತೆಯ ಎದೆಗೆ ಪೆಟ್ಟು

ಆಗಿತ್ತು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಅದೇ ರೀತಿ ನನ್ನ ಅತ್ತೆಯ ಎಡಗಾಲಿಗೆ ಪೆಟ್ಟು ಆಗಿತ್ತು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆಟೋದಲ್ಲಿ ಇದ್ದವರು ಎಲ್ಲರೂ ಕೆಳಗೆ ಬಿದ್ದೇವು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಬುಲೆರೋ ವಾಹನದ ಚಾಲಕನು ಅಪಘಾತ ಪಡಿಸಿ ಓಡಿ ಹೋಗಿರುತ್ತಾನೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆದ ಗಾಯಗಳು ಕುರಿತು ನನಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಲಬುರಗಿಯ ಆಸ್ಪತ್ರೆಯಲ್ಲಿಚಿಕಿತ್ತೆಯನ್ನು ಪಡೆದುಕೊಂಡಿರುತ್ತೇನೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಬುಲೆರೋ ವಾಹನ ಚಾಲಕನ ತಪ್ಪಿ ನಿಂದ ಅಪಘಾತ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾಹನದ ಛಯಾಚಿತ್ರ ವನ್ನು ತೆಗೆದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರನ್ನು ಕೊಟ್ಟಿರುತ್ತೇನೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ಬೆಳಗ್ಗೆ 10 ಗಂಟೆಗೆ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಆಟೋದ ಚಾಲಕನ ತಪ್ಪಿ ನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಆಟೋದ ಚಾಲಕನಿಗ ಚಾಲನಾ ಪರವಾನಿಗೆ ಪತ್ರ ಹೊಂದಿಲ್ಲ ಮತ್ತು ಸದರಿ ಆಟೋ ವಿಮೆಗೆ ಒಳಪಡೆದೇ ಇರುವ ಕಾರಣ ಅಪಘಾತ ಪರಿಹಾರವನ್ನು ಪಡೆಯುವ ಸಲುವಾಗಿಬುಲೆರೋ ವಾಹನದ ಮೇಲೆ ನಾವು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಿಲ್ಲ. ಅಪಘಾತಕ್ಕೂ ಮತ್ತು ಬುಲೆರೋ ವಾಹನದ ಚಾಲಕನಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.